■ ವಿಶಾಖ ಎನ್.

# ಪ್ರದೀಪ್ ಎಂಬ ಜಾಣ 'ಡ್ಯೂಡ್'



ನೀರಿನ ಕ್ಯಾನ್ ಮನೆ ಮನೆಗೆ ಮಾರುತ್ತಿದ್ದ, ರೆಸ್ಟೋರೆಂಟ್ ಇಟ್ಟು ಕೈ ಸುಟ್ಟುಕೊಂಡ ರಿಷಬ್ ಶೆಟ್ಟಿ 'ಕಾಂತಾರ' ಸಿನಿಮಾಗಳ ಮೂಲಕ ಕೋಟಿ ಕೋಟಿ ವಹಿವಾಟು ನಡೆಸಿದ ಕಥೆ ಈಗ ಜನಪ್ರಿಯ. ಅತ್ತ ತಮಿಳುನಾಡಿನ ನೆಲದಲ್ಲಿ ಪ್ರದೀಪ್ ರಂಗನಾಥನ್ ಎಂಬ ಯುವಕ ಚಲನಚಿತ್ರ ಮಾಧ್ಯಮದಲ್ಲಿ ನೋಡನೋಡುತ್ತಲೇ ಹೊಳೆಯುವ ತಾರೆಯಾಗಿರುವ ಇನ್ನೊಂದು ಕಥೆಯೂ ಜನಜನಿತವಾಗುತ್ತಿದೆ. ಪ್ರದೀಪ್ ಹುಟ್ಟಿದ್ದು 1993ರಲ್ಲಿ. ಮಧ್ಯಮವರ್ಗದ ಕುಟುಂಬದ ಬಹುತೇಕರಂತೆ ಅವರೂ ಮಾಹಿತಿ ತಂತ್ರಜ್ಞಾನ ವಿಷಯದಲ್ಲಿ ಎಂಜಿನಿಯರಿಂಗ್ ಪದವಿ ಪಡೆಯಲೆಂದು ಕಾಲೇಜು ಸೇರಿದರು. ಅವರೊಳಗೆ ಒಬ್ಬ ಕಥೆಗಾರ ಆಗಿನಿಂದಲೂ ಹುದುಗಿದ್ದ. ಅವರು ಸ್ನೇಹಿತರಿಗೆ ಕಥೆ ಹೇಳುತ್ತಿದ್ದ ರೀತಿಯಲ್ಲೇ ಹೊಸತನದ ಬನಿ ಇರುತ್ತಿತ್ತು.

ಅದನ್ನೇ ಬಂಡವಾಳ ಮಾಡಿಕೊಂಡು ಕಿರುಚಿತ್ರಗಳನ್ನು ಮಾಡಲಾರಂಭಿಸಿದರು. 'ವಾಟ್ಸಾಪ್ ಕಾದಲ್', 'ಕಾಲೇಜ್ ಡೈರೀಸ್' ಹೆಸರಿನ ಕಿರುಚಿತ್ರಗಳು ಹೊಸ ತಲೆಮಾರಿನ ಬಹುಸಂಖ್ಯಾತರಿಗೆ ರುಚಿಸಿದವು. ವೆಲ್ಸ್ ಫಿಲ್ಮ್ ಇಂಟರ್‌ನ್ಯಾಷನಲ್ ಕಂಪನಿಯು ಈ ಪ್ರತಿಭಾವಂತನಿಂದ ಒಂದು ಚಿತ್ರ ನಿರ್ಮಿಸಲು ತಾನಾಗಿಯೇ ಮುಂದಾಯಿತು. 'ಕೊಮಲಿ' ತಮಿಳು ಸಿನಿಮಾ ಹುಟ್ಟಿದ್ದು ಹಾಗೆ. ಜಯಂ ರವಿ ಹಾಗೂ ಕಾಜೋಲ್ ಅಗರ್ವಾಲ್ ಜೋಡಿಯಿಂದ ಅಪರೂಪದ ಪ್ರೇಮ ಕಥೆಯನ್ನು ಪ್ರದೀಪ್ ತೋರಿಸಿದರು. ದೀರ್ಘಾವಧಿ ಪ್ರಜ್ಞೆ ಕಳೆದುಕೊಂಡ ಯುವಕನೊಬ್ಬ ಆಮೇಲೆ ಬದಲಾದ ಜಗತ್ತಿಗೆ ಹೊಂದಿಕೊಂಡು, ಹೊಸ ಅನ್ವೇಷಣೆಗಳನ್ನು ತನ್ನದಾಗಿಸಿಕೊಳ್ಳುವ ಬಗೆಯನ್ನು ಹಾಸ್ಯದ ಶೈಲಿಯಲ್ಲಿ ತೋರಿದರು. ಚಿತ್ರದ ಓಘ ಈ ನಿರ್ದೇಶಕನಿಗೆ ಗೆಲುವು ತಂದಿತ್ತಿತು. ಹಾಕಿದ ₹27 ಕೋಟಿ ಬಂಡವಾಳದ ಮೂರು ಪಟ್ಟು ವಸೂಲು ಮಾಡಿಕೊಟ್ಟ ಚಿತ್ರ ಇದು.

2019ರಲ್ಲಿ ಪ್ರದೀಪ್ ಮೊದಲ ಸಿನಿಮಾ ಪಯಣ ಶುರುವಾದದ್ದು. ಅದಾಗಿ ಮೂರು ವರ್ಷಗಳಲ್ಲಿ ಕೋವಿಡ್ ಕಾರಣದಿಂದ ಎಷ್ಟೋ ಚಿತ್ರಕರ್ಮಿಗಳು ಕಂಗಾಲಾಗಿದ್ದಾರೆ, ಈ ಯುವಕ ಹೊಸ ಸಿನಿಮಾ ಕಥೆ ಮಾಡಿಟ್ಟುಕೊಂಡು ಸಿದ್ಧವಿದ್ದರು. ಮತ್ತೆ ನಿರ್ಮಾಪಕರು ಸಿಕ್ಕರು. ಆದರೆ, ಕೊಟ್ಟ ಬಜೆಟ್ ಕೇವಲ ಐದು ಕೋಟಿ ರೂಪಾಯಿ. ಪ್ರದೀಪ್ ಈ ಸಲ ತಾವೇ ನಾಯಕ ಆಗುವ ಧೈರ್ಯ ಮಾಡಿದರು. ಕೃಶ ದೇಹದ, ಕಪ್ಪು ಬಣ್ಣದ ಯುವಕ ಅದು ಏನು ಕಿಸಿದಾನು ಎಂದು ಮೂದಲಿಸಿದವರೂ ಇದ್ದರು. ಇವಾನಾ, ರವೀನಾ ರವಿ, ಯೋಗಿ ಬಾಬು ಅಭಿನಯದ 'ಲವ್ ಟುಡೆ' ತಮಿಳು ಚಿತ್ರವು ಒಟ್ಟು ನೂರೈದು ಕೋಟಿ ರೂಪಾಯಿ ಬಾಚಿಹಾಕಿತು. ರಾಮ್ ಕಾಮ್ ಮಾಡಿದರೆ ಹೊಸ ತಲೆಮಾರಿನ ಪ್ರೇಕ್ಷಕರು ಒಪ್ಪುತ್ತಾರೆ ಎನ್ನುವುದನ್ನು ಪ್ರದೀಪ್ ಮತ್ತೊಮ್ಮೆ ರುಜುವಾತು ಮಾಡಿದರು.

ಇದೇ ವರ್ಷ 'ಡ್ರ್ಯಾಗನ್' ಎಂಬ ಮತ್ತೊಂದು ಸಿನಿಮಾ ಬಿಡುಗಡೆಯಾಗಿ, ನೂರೈವತ್ತು ಕೋಟಿ ರೂಪಾಯಿ ಹಣ ಮಾಡಿಕೊಟ್ಟಿತು. ಅನುಭವಿ ನಟಿ ಅನುಪಮಾ ಪರಮೇಶ್ವರ್ ಈ ಸಿನಿಮಾದಲ್ಲಿ ಪ್ರದೀಪ್ ಅವರಿಗೆ ನಾಯಕಿಯಾದರು.

'ಲವ್ ಟುಡೆ' ಸಿನಿಮಾಗೆ ಎಪ್ಪತ್ತು ಲಕ್ಷ ರೂಪಾಯಿ ಸಂಭಾವನೆ ನೀಡುವುದಾಗಿ ನಿರ್ಮಾಪಕರು ಒಪ್ಪಿದ್ದರು. ಸಿನಿಮಾದ ಭರ್ಜರಿ ಯಶಸ್ಸು ನೋಡಿ ಅದರ ದುಪ್ಪಟ್ಟನ್ನು ತಾವಾಗಿಯೇ ಸಂಭಾವನೆಯಾಗಿ ಕೊಟ್ಟರು. ಈಗ 'ಡ್ಯೂಡ್' ಎಂಬ ಹೊಸ ಸಿನಿಮಾ ಕೂಡ ನೂರಾರು ಕೋಟಿ ರೂಪಾಯಿ ವ್ಯವಹಾರ ನಡೆಸಿ ಈ ಹುಡುಗನನ್ನು ಸ್ಟಾರ್ ಮಾಡಿದೆ. ■

## ಅಸರಾನಿ ನೆನಕೆ



ಗೋವರ್ಧನ್ ಅಸರಾನಿ ಇತ್ತೀಚೆಗೆ 84 ವರ್ಷಗಳ ತುಂಬು ಬದುಕನ್ನು ಮುಗಿಸಿದರು. 'ಶೋಲೆ' ಹಿಂದಿ ಸಿನಿಮಾದ ಜೈಲರ್ ಪಾತ್ರದಲ್ಲಿ ಛಾಪು ಮೂಡಿಸಿದ್ದ ಅವರು 'ಅಮರ್ ಅಕ್ಬರ್ ಆಂಥೋನಿ', 'ಚುಪ್ಕೆ ಚುಪ್ಕೆ' ಚಿತ್ರಗಳಲ್ಲೂ ಕಚಗುಳಿ ಇಟ್ಟವರು. ಕಾಮಿಡಿ ಟೈಮಿಂಗ್ ಜೊತೆಗೆ ಬದುಕಿನ ಸಕಲ ಭಾವಗಳನ್ನು ತುಳುಕಿಸಬಲ್ಲವರಾಗಿದ್ದ ಅವರಲ್ಲಿ ಅದಮ್ಯ ಜೀವನೋತ್ಸಾಹ ಇತ್ತು.

ಪಿಂಕಿ ಮೈದಾಸಾನಿ ಎಂಬ ಗಾಯಕಿ ಇನ್‌ಸ್ಟಾಗ್ರಾಮ್ ನಲ್ಲಿ ಪೋಸ್ಟ್ ಮಾಡಿರುವ ಒಂದು ವಿಡಿಯೊ ಈಗ ಜನ ಮೆಚ್ಚುಗೆ ಗಳಿಸಿದೆ. ಅಸರಾನಿ ಕೊನೆಯುಸಿರೆಳೆದ ಕೆಲವೇ ದಿನಗಳ ಮುಂಚೆ ಅವರು ಪಿಂಕಿ ಹಾಡಿದ ಕಾರ್ಯಕ್ರಮದಲ್ಲಿ ವೇದಿಕೆ ಹತ್ತಿ ಬಿಂದಾಸ್ ಕುಣಿದಿದ್ದರು. ಅಷ್ಟು ಚುರುಕಾಗಿ ಇದ್ದ ಅವರ ಸಾವಿನ ಸುದ್ದಿ ಕ್ಷಣ ಕಾಲ ಪಿಂಕಿ ಅವರಲ್ಲಿ ಅಚ್ಚರಿ ಮೂಡಿಸಿತಂತೆ.

ಹಾಸ್ಯ ಹೊಮ್ಮಿಸುವ ಬಹುತೇಕ ನಟರಲ್ಲಿ ಜೀವನಪ್ರೀತಿ ಹೀಗೆ ಮಡುಗಟ್ಟಿರುತ್ತದೆ ಎಂದು ಅನೇಕರು ದಿಗ್ಗಜ ನಟನನ್ನು ಸ್ಮರಿಸುತ್ತಾ ಇದ್ದಾರೆ. ■